

> “ನಾನು ಲೋಕವನ್ನು ಪ್ರೀತಿಸುತ್ತೇನೆ ಅಂದರೆ ಆ ಮಾತಿಗೆ ಅರ್ಥವಿಲ್ಲ. ಯಾರೋ ಇಬ್ಬರು ಸ್ನೇಹಿತರನ್ನು ಪ್ರೀತಿಸುತ್ತೇನೆ ಎಂದರೆ ಅದು ಪ್ರೀತಿ - ದ್ವೇಷ ಎರಡನ್ನು ಒಳಗೊಂಡ ಒಂದು ಸಂಬಂಧ ಅದು. ಆ ನಿರ್ದಿಷ್ಟತೆ ಇದೆಯಲ್ಲ ಅದು ಬರುವುದೇನೇ ಸಣ್ಣದರಲ್ಲಿ ನಂಬಿಕೆ ಇಟ್ಟಿರುವಾಗ. ದೊಡ್ಡದರಲ್ಲಿ ಬದುಕುವುದು ಅಂತ ಇಲ್ಲ. ಅದರ ಬಗ್ಗೆ ನನಗೆ ಯಾವತ್ತೂ ನಂಬಿಕೆ ಇಲ್ಲ...

ಯಾವುದೇ ಅನುಭವ ಕೂಡ ಸಂಕೀರ್ಣವಾಗಿರುತ್ತದೆ ಮತ್ತು ಸೂಕ್ಷ್ಮವಾಗಿರುತ್ತದೆ. ಅಂದರೆ, ಮನಸ್ಸಿನ ಖಾಸಗಿ ಗುಣ ಅದು. ಅದು ಲಾವೋತ್ಸೆಯಲ್ಲಿತ್ತು. ಕುಮಾರವ್ಯಾಸನಲ್ಲಿದೆ. ಅಲ್ಲಮನಲ್ಲೂ ಇದೆ. ಅಲ್ಲಮನ ‘ನೀರನೀಸುವವನ ದೇಹ ಬಳಲುವುದಲ್ಲದೇ, ನೀರು ಬಳಲುವುದೇ ಅಯ್ಯ’ ಅಂದರೆ ಆಹಾ! ಅಂತ ಅನ್ನಿಸುತ್ತದೆ ನಮಗೆ. ‘ಒಲುಮೆಯ ಕೂಟಕ್ಕೆ ಹಾಸಿನ ಹಂಗೇಕೆ’ ಅಂದರೆ ಹೌದಲ್ಲ ಅಂತ ಅನ್ನಿಸುತ್ತದೆ. ಎಲ್ಲಾ ಶ್ರೇಷ್ಠ ಮನಸ್ಸುಗಳು ಮುಖ್ಯವಾಗಿ, ಅದರಲ್ಲೂ ಕವಿ ಮನಸ್ಸುಗಳಂತೂ ಈ ಲೋಕದ ಅನುಭವವನ್ನು ಗ್ರಹಿಸುತ್ತ ಇರುತ್ತವೆ. ಲೋಕದ ಅನುಭವ ಅಂದರೆ, ಆ ಸಂಕೀರ್ಣತೆ, ಆ ಜಿಗುಟುತನ ಇರುವ ಅದರ ಸ್ವಂತ ಗುಣ. ಅದಿಲ್ಲದೆ ಬರೀ ಕ್ರಮಬದ್ಧವಾಗಿ ಗ್ರಹಿಸುತ್ತದೆಯಲ್ಲ, ಅದು ಬೋಳೆ ಮನಸ್ಸಾಗಿರುತ್ತೆ. ನಾನು ಅನುವಾದಿಸಿದ ತಾವೋ ಪದ್ಯ ‘ಶೂನ್ಯದ ಉಪಯುಕ್ತತೆ’ ಎಂಬುದೊಂದಿದೆ. ಅದರ ವಿವರ ಹೀಗಿದೆ: ಈ ಗಾಡಿಚಕ್ರ ಇರುತ್ತದಲ್ಲ ಅದಕ್ಕೆ ಹನ್ನೆರಡು ಅರ ಇರುತ್ತದೆ. ಮಧ್ಯದಲ್ಲಿ ಒಂದು ಸೆಂಟರ್ ಹಬ್ ಇರುತ್ತದೆ. ನಾವು ನೀರು ಸುರಿಯೋದು ಮಡಿಕೆಗಲ್ಲ, ಅದರ ಮಧ್ಯ ಇರೋ ಖಾಲಿ ಇರುವ ಜಾಗಕ್ಕೆ. ಇದು ಎಷ್ಟು ಚೆನ್ನಾಗಿದೆ ನೋಡಿ. ನಾನು ಕುರ್ಚಿ ಮೇಲೆ ಕೂತಿದ್ದೇನೆ ಎಂದರೆ, ಆ ಮರದ ಒಳಗೆ ಕೂತಿಲ್ಲ, ಕುರ್ಚಿ ಮೇಲಿರೋ ಖಾಲಿ ಜಾಗದಲ್ಲಿ ಕೂತಿದ್ದೇನೆ ಅಂತ. ಖಾಲಿತನ ಎನ್ನುವುದು ಎಷ್ಟು ಮುಖ್ಯವಾದದ್ದು ಎಂಬುದು ನಮಗೆ ಗೊತ್ತಿರಲಿಲ್ಲವಲ್ಲ. ಇದು ನನ್ನ ದೃಷ್ಟಿಯನ್ನೆ ಪಲ್ಲಟಿಸುತ್ತಿದೆಯಲ್ಲ ಎನ್ನುವ ತರಹದ್ದು. ಈ ಕಾರಣಕ್ಕಾಗಿ ನನ್ನನ್ನು ತಾವೋ ಆಕರ್ಷಿಸಿತು.

▸ **ನೀವು ಸಾಹಿತ್ಯವನ್ನು ತರಗತಿಗಳಲ್ಲಿ ಪಾಠಮಾಡುವಂತಹ ಒಬ್ಬ ಮೇಷ್ಟ್ರಾಗಬಹುದಾಗಿತ್ತು ಅಥವಾ ಸಾಹಿತ್ಯದ ಒಬ್ಬ ವಿಮರ್ಶಕ ಕೂಡ ಆಗಬಹುದಾಗಿತ್ತು. ಒಂಥರ ಬೇಕಂತಲೇ ತಪ್ಪಿಸಿಕೊಂಡು ಕೆ.ಆರ್. ನಗರದಂತಹ ಒಂದು ಸಣ್ಣ ಊರಿನಲ್ಲಿ ಉಳಿದುಕೊಂಡಿರಿ. ಈ ತರಹ ಉಳಿದುಕೊಂಡು ಲೋಕದಲ್ಲಿ ನೀವು ನೋಡುವ ಘಟನೆಗಳು, ನೀವು ಕಾಣುವ ಸಣ್ಣ ಸಣ್ಣ ಸಂಗತಿಗಳು – ಅದು ಪ್ರಕೃತಿಯಲ್ಲಿ ನಡೆಯುವಂತಹ ಸಂಗತಿಗಳಿರಬಹುದು ಅಥವಾ ಮನುಷ್ಯ ಲೋಕದಲ್ಲಿ ನಡೆಯುತ್ತಿರುವಂತಹ ಸಣ್ಣಪುಟ್ಟ ಸಂಗತಿಗಳಿರಬಹುದು. ಆ**